ಒಂದು ಸಾಹಸವಾಗಿತ್ತು. ಹುಸೇನನ ಲಾರಿ ಬೆಳಿಗ್ಗೆ ಕೆಲಸಕ್ಕೆ ಬರುವಾಗ ಮಣ್ಣಿನ ದಾರಿಯಲ್ಲಿ ಮದುಮಗಳಂತೆ ಹೂಹೆಜ್ಜೆಯಲ್ಲಿ ಬಂದಿದ್ದರೂ ಸಾಧುಶೆಟ್ಟಿಯ ಬೈಲಿಗಿಳಿಯಲು ಮಾತ್ರ ಅದು ಇನ್ನಿಲ್ಲದ ಹಟಮಾಡಿದ್ದನ್ನು ಕಂಡು ಮಾರಪ್ಪ

ಆಳ್ವರಿಗಂತೂ ರೇಗಿ ಹೋಗಿತ್ತು. ಆ ಲಾರಿಯನ್ನು 'ತಣಿಸಿ ಖುಷಿಪಡಿಸುವುದರಲ್ಲಿ' ಡ್ರೈವರ್ ಹುಸೇನ ಸೋತು ಹೈರಾಣವಾಗಿ ಕೊನೆಗೆ ಆತನೇ ಗೆದ್ದು, ಮರವನ್ನು ಲಾರಿಯನ್ನು ಹೇರಿ ತಂದು, ಕೆರೆಕೋಡಿಯಲ್ಲಿ ಎದ್ದು ನಿಲ್ಲಬೇಕಾಗಿದ್ದ ದೈವಸ್ಥಾನದೆದುರು ಮಲಗಿಸಿದ್ದು—ಇದೆಲ್ಲವೂ ಪಟೇಲ ದೇವಪ್ಪಶೆಟ್ಟರು ಕನಸಲ್ಲಿ ಕಂಡ ಘಟನೆಯೋ ಏನೋ ಎನ್ನುವಂತೆ ನಡೆದೇ ಹೋಗಿತ್ತು.

ಇನ್ನೇನು... ಶ್ರೀಧರಾಚಾರಿಗೆ ಅನುಕೂಲವಾಗುವಂತೆ, ಆತ ಕೈ ತೋರಿದ ಜಾಗಕ್ಕೇ ಮರ ಬಂದು ಬಿದ್ದು ಭೀಷ್ಮನಂತೆ ಮಲಗಿದೆ. ನಿನ್ನೆ ಸಂಜೆಯೇ ಬೆಸ್ತರಕೇರಿಯಿಂದ ಹುಸೇನನ ಲಾರಿಯಲ್ಲಿ ದೊಡ್ಡ ದೋಣಿಯೊಂದು ಬಂದಿಳಿದು, 'ಮುಂದಿನ ನಲವತ್ತೈದು ದಿವಸಗಳ ಕಾಲ ತನ್ನ ಒಡಲಲ್ಲಿ ತುಂಬಲಿರುವ ಎಳ್ಳೆಣ್ಣೆಯಲ್ಲಿ ಆ 'ಕೊಡಿಮರ' ಬಂದು ಯಾವಾಗ ಬೀಳುತ್ತಪ್ಪಾ' ಎಂದು ಅದು ಬಾಯಗಲಿಸಿಕೊಂಡು ಕೂತಿದೆ!

ಇಂದು ಮುಂಜಾನೆ ದೇವರು ಹುಟ್ಟಿ ಅರೆತಾಸು ಕಳೆದಿಲ್ಲ, ಅಷ್ಟರಲ್ಲೇ ಶ್ರೀಧರಾಚಾರಿ ಮಡಿ ಮಿಂದು ಬಂದು 'ಕೊಡಿಮರ'ದ ಕೆಲಸಕ್ಕೆ ಕೈ ಹಾಕಿಯಾಗಿತ್ತು. ಆತ ಮರದ ಬುಡದಿಂದ ತೊಗಟೆ ಜಾರಿಸುತ್ತ, ಸಾಂಕೇತಿಕವಾಗಿ 'ಆ ಕೆಲಸವನ್ನು' ಶಾಸ್ತ್ರಕ್ಕೆ ಒಂದಷ್ಟು ಮಾಡಿ ಮುಗಿಸಿ ನಂತರದಲ್ಲಿ, ಅದನ್ನು ಅಳಿಯ ರಾಘುವಿನ ಕೈಗೆ ಒಪ್ಪಿಸಿ, ತಾನು ದೈವಸಾನದ ಮುಚ್ಚಿಗೆಯ ಕೆತ್ತನೆ ಕೆಲಸಕ್ಕೆ ಕೈ ಹಾಕಲು ಹೋಗುವ ಅವಸರದಲ್ಲಿದ್ದ. ಆತ ಆ ಮರದ ಬುಡದ ತೊಗಟೆ ಜಾರಿಸುತ್ತ... ಇನ್ನೇನು ಮರದ ನಡುವತ್ತ ಸರಿಯುತ್ತಿದ್ದಾನಷ್ಟೆ... ಅಷ್ಟರಲ್ಲೇ ಆತನಿಗೆ ಒಳ ಟೊಳ್ಳೊಂದು ಕಾಣಿಸಿತ್ತು! ನಿಂಬೆಹಣ್ಣು ತೂರುವಷ್ಟು ಅಗಲದ ಟೊಳ್ಳು! ಎರಡು ನಿಂಬೆಹಣ್ಣುಗಳನ್ನು ತೂರಿಸಿಡಬಹುದಾದಷ್ಟು ಆಳದ ಟೊಳ್ಳು! ಶ್ರೀಧರಾಚಾರಿಗೆ ತಕ್ಷಣವೆ ನೀರಲ್ಲಿ ಬಿದ್ದ ಹೇನಿನಂತೆ ಕೈಕಾಲು ನಿಂತಂತಾಗಿ, ಅಧೀರನಾದ. ಕೊಡಿಮರಕ್ಕೆಂದು ಆಯ್ದು ತಂದ ಮರದಲ್ಲಿ ಹೀಗೆ... ಒಳ ಟೊಳ್ಳೊಂದು ಕಾಣಿಸುವುದಾದರೆ ಅದು ದೈವದ ಅಸಹನೆ ಎಂದೇ ಅರ್ಥ. ಆತ ಹಿಡಿದ ಕೆಲಸವನ್ನು ಅಲ್ಲೇ ಬಿಟ್ಟು ಕ್ಷಣಮಾತ್ರದಲ್ಲೇ ಪಟೇಲರ ಬೈಲಿನತ್ತ ದೌಡಾಯಿಸಿದ್ದ.

ಆತ ಪಟೇಲರ ದಿಡ್ಡಿ ಬಾಗಿಲಿಗೆ ಬರುವಷ್ಟರಲ್ಲಿ... ಆ ಹೊತ್ತಿಗಾಗಲೇ ಪಟೇಲ ದೇವಪ್ಪ ಶೆಟ್ಟರು, ತಮ್ಮ ಮುಂಜಾನೆಯ ಕೆಲಸವನ್ನೆಲ್ಲ ಮುಗಿಸಿ ಬಿಟ್ಟು, ಇನ್ನೇನು ಒಮ್ಮೆ 'ಕೊಡಿಮರದ ಕೆಲಸ ನೋಡಿ ಬರುವ' ಅಂತ ದೈವಸ್ಥಾನದತ್ತಲೇ ಹೊರಡಲು ಸಿದ್ಧರಾಗುತ್ತಿದ್ದರು. ಅಷ್ಟರಲ್ಲೇ ಶ್ರೀಧರಾಚಾರಿ ಪಟೇಲರ ಚಾವಡಿಗೇರಿದ್ದ. ಶ್ರೀಧರಾಚಾರಿಯ ಆತಂಕದ ಮುಖವನ್ನು ಕಂಡೊಡನೆ ತಾವೂ ಆತಂಕಿತರಾದ ಶೆಟ್ಟರು 'ಏನಪ್ಪಾ ಏನು?... ಮತ್ತೇನು ರಾಮಾಯಣ ಆಗಿದೆ?!' ಎಂದು ಪೀಠಿಕೆ ಎತ್ತುವುದರೊಳಗೆ ಆಚಾರಿ 'ಕೊಡಿಮರದ ಕತೆ'ಯನ್ನೆಲ್ಲ ಹೇಳಿ ಒಂದು ನಿಟ್ಟುಸಿರನ್ನೂ ಬಿಟ್ಟು ಪಟೇಲರ ಮುಂದಿನ ನಡೆಗಾಗಿ ಅಲ್ಲೇ ಚಾವಡಿಯಲ್ಲಿದ್ದ ವಕೀಲ್ ಬೆಂಚಲ್ಲಿ ಕೂತುಬಿಟ್ಟ.

ಶ್ರೀಧರಾಚಾರಿಯ ಮಾತು ಕೇಳಿಸಿಕೊಂಡ ಕೂಡಲೇ ದೇವಪ್ಪಶೆಟ್ಟರ ಅಕಲು ಹಾರಿಹೋದಂತಾಗಿತ್ತು. 'ಕೊಡಿಮರ'ಕ್ಕೆ ಮರ ಕಡಿದು ತಂದ ನಂತರದಲ್ಲಿ ಆ ಮರದಲ್ಲಿ ಹೀಗೆ ಊನ ಕಾಣಿಸಿಕೊಳ್ಳುವುದೆಂದರೆ, ದೈವಕ್ಕೆ ಅಸಹನೆಯಾಗಿದೆ ಎಂದೇ ಅರ್ಥ. ಶೆಟ್ಟರು ನಿಜಕ್ಕೂ ಚಿಂತಿತರಾದರು; ಆ ಮರದ 'ಅಪ್ಪ' ತಿಂಮಪೂಜಾರಿಯನ್ನು ಒಂದು ಕ್ಷಣ ಮನದಲ್ಲಿ ನೆನಪಿಸಿಕೊಂಡರು; ಅವರದೆ ಭಾರವಾಯಿತು. ಆತನ ಇಷ್ಟಕ್ಕೆ ವಿರುದ್ಧವಾಗಿಯೇ ಈ ಮರವನ್ನು ನಾವು ಕೊಂದೆವು; ಅದಕ್ಕಾಗಿಯೇ ಈ ಮರ ದೈವಕ್ಕೆ